**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 75/2018
ಪಿಡಬ್ಲು :28 ಸಿಡಬ್ಲು :29

| | | |
|---|---|---|
| ಸಾಕ್ಷಿಯ ಹೆಸರು | : | ಶ್ರೀ.ಹಣಮಂತ ಕೆಳಗಡೆ |
| ತಾಯಿಯ ಹೆಸರು | : | ಶ್ರೀ.ಸುಶಿಲವ್ವ ಕೆಳಗಡೆ |
| ವಯಸ್ಸು | : | 39 ವರ್ಷ |
| ಉದ್ಯೋಗ | : | ಪ್ಲಂಬರ್ |
| ವಾಸ್ತವ್ಯ | : | ಮುಗಳಖೋಡ |
| ದಿನಾಂಕ | : | 28-11-2025 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಚಾಸಾಃ 1, ಚಾಸಾಃ 8 ರಿಂದ ಚಾಸಾಃ 28 ಗೊತ್ತಿರುತ್ತಾರೆ. ಚಾಸಾಃ 30 ಗೊತ್ತಿಲ್ಲ. ಚಾಸಾಃ 31 ದುರ್ಗಪ್ಪ, ಚಾಸಾಃ 32 ಪ್ರಕಾಶ ಕಡಕೋಳ ಗೊತ್ತಿರುತ್ತಾರೆ. ಚಾಸಾಃ 33 ಮಿಲನ ದೆವನ್ನವರ, ಚಾಸಾಃ 34 ಮಲ್ಲು ಕುರಾಡೆ ಗೊತ್ತಿರುವುದಿಲ್ಲ. ಚಾಸಾಃ 35 ಎಸ್. ಸತ್ಯನಾರಾಯಣರಾವ್, ಚಾಸಾಃ 38, ಶಂಕರ ಲಕ್ಷ್ಮೇಶ್ವರ, ಚಾಸಾಃ 39 ಸಯ್ಯದ್ ನದಾಫ್, ಚಾಸಾಃ 40 ಅಕ್ಬರ್ ಅತ್ತಾರ ಗೊತ್ತಿರುವುದಿಲ್ಲ. ಚಾಸಾಃ 41 ಬೀರಪ್ಪ ಅಲಕನೂರ, ಚಾಸಾಃ42 ಅಮರ ಬಾವಿಮನಿ ಗೊತ್ತಿರುತ್ತಾರೆ. ಆರೋಪಿತರು ನನಗೆ ಗೊತ್ತಿರುವುದಿಲ್ಲ.

2. ನಾನು ಹಿಂದೂ ಮಾದರ ಜಾತಿಗೆ ಸೇರಿರುತ್ತೇನೆ. ನಮ್ಮೂರಿನಲ್ಲಿ ನಮ್ಮ ಸಮಾಜಕ್ಕೂ, ಬೇರೆ ಸಮಾಜಕ್ಕೂ ಜಾಗದ ವಿಚಾರದಲ್ಲಿ ಜಗಳ ಇರುವುದು ನನಗೆ ಗೊತ್ತಿರುವುದಿಲ್ಲ. ಮುಗಳಖೋಡದಲ್ಲಿರುವ ಮಾದರ ಓಣಿಯಿಂದ ನಮ್ಮ ಮನೆ ಅರ್ಧ ಕಿಲೋಮೀಟರ

ದೂರದಲ್ಲಿದೆ. ಮಾದರ ಓಣಿಯಲ್ಲಿರುವ ಯಲ್ಲಮ್ಮನ ಪಾದಕಟ್ಟೆ ಜಾಗವನ್ನು ನೋಡಿದ್ದೇನೆ. ಆ ಜಾಗದ ವಿಚಾರದಲ್ಲಿ ಮಾದರ ಜಾನಂಗಕ್ಕೂ, ಜೈನ ಸಮುದಾಯದವರಿಗೂ ಜಗಳ ಆದ ವಿಷಯ ನನಗೆ ಗೊತ್ತಿರುವುದಿಲ್ಲ. ಆ ಜಗಳದ ವಿಚಾರವಾಗಿ ಬಸಪ್ಪ ಮಾದರ ಅವರು ದೂರು ಕೊಟ್ಟ ವಿಚಾರ ನನಗೆ ಗೊತ್ತಿರುವುದಿಲ್ಲ.

3. ಪೋಲಿಸರು ಈಗ 8 ವರ್ಷಗಳ ಹಿಂದೆ ನಮ್ಮೂರಿಗೆ ಬಂದು ಜಗಳ ಆಗಿದೆ ಎಂದು ಹೇಳಿ ನನ್ನ ಸಹಿ ಮಾಡಿಸಿಕೊಂಡರು. ಯಾವ ವಿಚಾರದಲ್ಲಿ ಜಗಳ ಆಗಿದೆ ಎಂದು ಪೋಲಿಸರು ನನಗೆ ಹೇಳಿರುವುದಿಲ್ಲ. ಪೋಲಿಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ.

(**ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ, ಸಾಕ್ಷಿಯ ಹೇಳಿಕೆಯನ್ನು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು**).

**ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದ**

ನಮ್ಮೂರಿನಲ್ಲಿರುವ ಯಲ್ಲಮ್ಮನ ಪಾದಕಟ್ಟೆ ಪಕ್ಕದಲ್ಲಿ ಇರುವ ಜಾಗದ ವಿಚಾರವಾಗಿ ನಮ್ಮೂರಿನ ಜೈನ ಸಮುದಾಯದವರಿಗೂ, ಮಾದರ ಸಮಾಜದವರಿಗೂ 5-6 ತಿಂಗಳಿನಿಂದ ಜಗಳ ಇತ್ತು ಎನ್ನುವುದು ನನಗೆ ಗೊತ್ತಿಲ್ಲ. ತಹಶೀಲ್ದಾರ ರಾಯಬಾಗ ರವರು ಆ ಜಾಗವನ್ನು ಸರ್ವೇ ಮಾಡಿ ಅದು ಗ್ರಾಮಠಾಣಾ ಜಾಗ ಎಂದು ಹೇಳಿದ್ದರು ಎನ್ನುವುದು ನನಗೆ ಗೊತ್ತಿಲ್ಲ.

2. " ದಿನಾಂಕಃ 26-08-2017 ರಂದು ಬೆಳಗ್ಗೆ 10:00 ಗಂಟೆ ಸುಮಾರಿಗೆ ನಾನು ಮನೆಯಲ್ಲಿದ್ದಾಗ ನಮ್ಮ ಮನೆಯ ಹತ್ತಿರ ತಕರಾರು ಇರುವ ಜಾಗದಲ್ಲಿ ಜೈನ ಸಮಾಜದ ಜನರು ಕಟ್ಟಡ ಕಟ್ಟಲು ಸಳಿಗಳನ್ನು ನಿಲ್ಲಿಸುವುದು ಮಾಡುತ್ತಿದ್ದರು, ರಾಜು ಬಾಬನ್ನವರ, ಹಣಮಂತ ಬಾಬನ್ನವರ, ಪಿಂಟು ಹುಲ್ಲೋಳ್ಳಿ ಇದ್ದರು, ಆದ್ದರಿಂದ ನಮ್ಮ ಸಮಾಜದ ಹಿರಿಯರು ಮತ್ತು ಹೆಂಗಸರು ಕೂಡಿಕೊಂಡು ತಕರಾರು ಇರುವ ಜಾಗೆಯಲ್ಲಿ ಯಾವುದೇ ಕಟ್ಟಡದ ಕೆಲಸ ಆಗಬಾರದು ಅದನ್ನು ನಿಲ್ಲಿಸಬೇಕು ಎಂದು  ವಿಷಯ ತಿಳಿಸಲು ಮುಗಳಖೋಡ ಕಚೇರಿಗೆ ಹೋದೆವು, ಹಿರಿಯರಾದ ಶಿವನಿಂಗ, ಬಸಪ್ಪ ಬುರಡಿ, ಶ್ರೀಶೈಲ ಕಡಕೋಳ, ಶಿವಪ್ಪ ಸಂದ್ರಿಮನಿ, ಪತ್ರಕರ್ತ ಚಿದಾನಂದ ಇತರರು ಇದ್ದರು, ಅಲ್ಲಿ ಚೀಫ್ ಆಫೀಸರ ಅವರಿಗೆ ಭೇಟಿ ಆಗಿ ಅವರಿಗೆ ಜಾಗೆ ಬಗ್ಗೆ ವಿಷಯ ಹೇಳಿ ಕಟ್ಟಡ ಕಟ್ಟುವುದನ್ನು ನಿಲ್ಲಿಸಲು ಹೇಳಿದೇವು, ಚೀಫ್ ಆಫೀಸರ  ಹೊಸದಾಗಿ ಬಂದಿದ್ದರಿಂದ ಅವರು ಪುರಸಭೆಯಲ್ಲಿ ಕೆಲಸ ಮಾಡುವ ಸಿಬ್ಬಂದಿಗೆ ವಿಚಾರಿಸಿದಾಗ ಅವರೂ ಸಹ ಸದರಿ ಜಾಗೆಯಲ್ಲಿ ಕಟ್ಟಡ ಕಟ್ಟಲು ಮೊದಲು ಇದ್ದ ಚೀಫ್ ಆಫೀಸರ ಖಿಲಾರೆ ಅವರು ಅನುಮತಿ ಕೊಟ್ಟಿದ್ದರು ನಂತರ ಅದನ್ನು ರದ್ದುಪಡಿಸಿರುತ್ತಾರೆ, ಈ ಬಗ್ಗೆ ಬಾಬನ್ನವರ ಅವರಿಗೆ ನೋಟಿಸ ಕೊಡಲು ಹೋದಾಗ ಅವರ ಅದನ್ನು ತೆಗೆದುಕೊಂಡಿಲ್ಲ, ಆದರೆ ರಜಿಸ್ಟರ ಪೋಸ್ಟ ಮೂಲಕ ಕಳುಹಿಸಿದರು ತೆಗೆದುಕೊಂಡಿಲ್ಲ ಅಂತಾ ಅಂದರು, ಆಗ ಈ ಬಗ್ಗೆ ವಿಚಾರಿಸಲು ಪುರಸಭೆಯ ಚೀಫ್ ಆಫೀಸರ  ಮತ್ತು ಸಿಬ್ಬಂದಿ ಜನರು ಬಂದರು, ಆ ಜಾಗೆಯಲ್ಲಿ ಬಾಬನ್ನವರ ಮತ್ತು ಜೈನ ಸಮಾಜದವರು ಕೂಡಿ ಪಿಲ್ಲರಗೆ ಹಾಕಿದ್ದ ಕಬ್ಬಿಣದ ಸಳಿ ನಿಲ್ಲಿಸುತ್ತಿದ್ದರು, ನಮ್ಮ ಸಮಾಜದ ಜನರು ಕೂಡಿಕೊಂಡು ಕಲ್ಲಿನ ಕುಟ್ಟಿ ಹತ್ತಿರ ನಿಂತೇವು, ಆಗ ಸುಮಾರು 11:00 ಗಂಟೆ ಆಗಿತ್ತು, ಚೀಫ್ ಆಫೀಸರ ಜೈನರಿಗೆ ಜಾಗೆಯಲ್ಲಿ ಕಟ್ಟಡ ಕಟ್ಟಬಾರದು ಎಂದು ಹೇಳಿ ವಿಚಾರಿಸುತ್ತಿದ್ದಾಗ, ಜೈನ ಸಮುದಾಯದವರು ನಾವು ಕೆಲಸ ನಿಲ್ಲಿಸುವುದಿಲ್ಲ ಎಂದು ಹೇಳಿದರು, ನಮಗೆ ಜಾತಿ ನಿಂದನೆ ಮಾಡಿ ನಮಗೆ ನೂಕಿಸಿ ಹೊಡೆಯಲು ಬಂದರು, ಕಲ್ಲುಗಳನ್ನು ನಮ್ಮವರ ಮೇಲೆ ಒಗೆಯಹತ್ತಿದರು ಮತ್ತು ಕೈಯಲ್ಲಿ ಕಬ್ಬಿಣದ ಚಡಿ, ಬಂಬೂ ಕಟ್ಟಿಗೆಯನ್ನು ಹಿಡಿದುಕೊಂಡು

ನನಗೂ ಹೊಡೆಯಲು ಬಂದರು, ಅದರಲ್ಲಿ ಬಸಪ್ಪ ಮಾದರ, ಅನೀಲ ಈರಗಾರ, ಇವರಿಗೆ ಮತ್ತು ಇನ್ನೂ ಕೆಲವರಿಗೆ ಹೊಡೆದು ಗಾಯಪಡಿಸಿದರು, ನಮ್ಮ ಸಮಾಜದ ಹೆಂಗಸರಿಗೂ ಸಹ ಜೈನ ಸಮಾಜದವರು ಹೊಡೆಬಡೆ ಮಾಡಿದ್ದರಿಂದ ಅವರಿಗೂ ಪೆಟ್ಟಾಗಿತ್ತು, ಅಲ್ಲಿಂದ ನಾವು ಓಡಿಹೋದೇವು, ತಂಟೆ ಆದ ನಂತರ ಗಾಯ ಆದವರಿಗೆ ನಾವು ಕರೆದುಕೊಂಡು ಹೋಗಿ ಹಾರೂಗೇರಿಯ ಸರ್ಕಾರಿ ಆಸ್ಪತ್ರೆಗೆ ತೋರಿಸಿರುತ್ತೇವೆ, ಬಸಪ್ಪ ಮಾದರ ಮತ್ತು ಇತರೆ ಕೆಲವು ಜನರು ಹೆಚ್ಚಿನ ಉಪಚಾರದ ಸಲುವಾಗಿ ಹಾರೂಗೇರಿಯ ನಾರಗೊಂಡ ಆಸ್ಪತ್ರೆಯಲ್ಲಿ ದಾಖಲಾಗಿರುತ್ತಾರೆ, ಈ ತಂಟೆಯ ಬಗ್ಗೆ ಬಸಪ್ಪ ಯಮನಪ್ಪ ಮಾದರ ಇವರು ಪಿರ್ಯಾದಿ ಕೊಟ್ಟಿರುತ್ತಾರೆ " ಎಂದು ನಾನು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎನ್ನುವುದು ಸರಿಯಲ್ಲ. ಸಾಕ್ಷಿಯ ಹೇಳಿಕೆಯನ್ನು ನಿಪಿ– 19 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 1 ಮತ್ತು 2 ನೇ ಆರೋಪಿತರ ಪರ ಶ್ರೀ. ಬಿ.ಜಿ.ಜಿ. ವಕೀಲರಿಂದ ಹಾಗೂ 3 ರಿಂದ 34 ನೇ ಆರೋಪಿತರ ಪರ ಶ್ರೀ ಎ.ಬಿ.ಬಿ .ವಕೀಲರಿಂದ**

ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.